**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

ಅಸಲು ದಾವೆ ಸಂಖ್ಯೆ. 122/2023

ಪಿ.ಡಬ್ಲ್ಯು:1

**ದಿನಾಂಕಃ 29-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಪರ ಶ್ರೀ. ಎನ್ ಎಸ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ದಾವಾ ನಿವೇಶನದ ಇ-ಸ್ವತ್ತಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, 2 ಋಣಭಾರ ರಹಿತ್ಯಾ ಪ್ರಮಾಣಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು, 2 ಖಾತಾ ನಕಲಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು, ದಿಃ 24-06-1993 ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ನಗರಯೋಜನಾ ಇಲಾಖೆಯ (ಸಿ ಡಿ ಒ) ಆದೇಶದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ನಗರಯೋಜನೆ ಇಲಾಖೆ, ಬೆಂಗಳೂರು ರವರು ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ದಿಃ 24-06-1993 ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ದಿಃ 26-02-1997 ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದ ಅಸಲು ದಾವಾ ನಂ. 25/2006 ರ ರಾಜೀ ಡಿಕ್ರಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ಕಡೂರಿನ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಅಸಲು ದಾವಾ ನಂ. 279/2019 ರ ತೀರ್ಪು ಮತ್ತು ಡಿಕ್ರಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ದಿಃ 06-02-2023 ರಂದು ವಾದಿಯು ಪ್ರತಿವಾದಿಗೆ ನೀಡಿದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ.ಸ.ಇ.ಎ.ಒ.

Sd/

2 ನೇ.ಹೆ.ಪ್ರಃದಃನ್ಯಾಃದಂ.,ರವರು,

ಕಡೂರು.